INDIAN JOURNAL OF HISTORY AND ARCHAEOLOGY

ISSN (e):2582-225X
Vol-3, Issue -2, July-Auguest, 2021, Page No,64-69
Peer Reviewed Journal, Referred Journal

# ಕಾಯಕ ಜೀವಿಗಳ ಚಳುವಳಿಯಿಂದ ಒಡಮೂಡಿ ವಚನ ಸಾಹಿತ್ಯ

**ಡಾ.ಲೋಕೇಶ.ಟಿ.ಟಿ.**[1]

ಕರ್ನಾಟಕದ ಸಂದರ್ಭದಲ್ಲಿನ 12ನೇ ಶತಮಾನದಲ್ಲಿ ನಡೆದಿರುವ ಪ್ರಜಾಸತ್ತಾತ್ಮಕ ಚಳವಳಿಯೇ ಬಸವಾದಿ ಘನಶರಣರು ಮಾಡಿರುವ ಚಳುವಳಿಯಾಗಿದೆ. ಈ ಮಹಾನ್ ಚಳುವಳಿಯನ್ನು ಕನ್ನಡ ಸಾಹಿತ್ಯದಲ್ಲಿ ಸಿ. ವೀರಣ್ಣ ಅವರು 'ಕಾಯಕ ಜೀವಿಗಳ ಚಳುವಳಿ' ಎಂದು ಕರೆದಿದ್ದಾರೆ. ಸರ್ವೇಸಾಮಾನ್ಯವಾಗಿ ಇಂದು ಇದೊಂದು ಧಾರ್ಮಿಕ ಚಳುವಳಿಯೆಂದು ಬಿಂಬಿತವಾಗಿದೆ. ಆದರೆ, ವೀರಣ್ಣ ಅವರು ಇದನ್ನು ಒಂದು ಭಿನ್ನ ನೆಲೆಯಿಂದ ವಿವೇಚಿಸುತ್ತಾರೆ. ಅದೇನೆಂದರೆ; "ಯಾವುದೇ ಒಂದು ಸಂಘಟಿತ ಚಳುವಳಿ ರೂಪುಗೊಳ್ಳುವುದಕ್ಕೆ ಕೇವಲ ಧಾರ್ಮಿಕ ಕಾರಣಗಳೇ ಸಾಕಾಗುವುದಿಲ್ಲ. ಆಯಾ ಕಾಲದ ಅನಿವಾರ್ಯತೆಯಿಂದ ಅವು ಧಾರ್ಮಿಕ ಹಿನ್ನೆಲೆಯಿಂದ ಮೂಡಿಬಂದಿದ್ದರೂ ಬದುಕಿನ ಮೂಲ ಸೂತ್ರವಾದ ಆರ್ಥಿಕ ಜೀವನದ ಸ್ವರೂಪವನ್ನು ಅವಲಂಬಿಸಿಯೇ ಮೈತಳೆದಿರುತ್ತದೆ."[1] ಈ ಹಿನ್ನೆಲೆಯಲ್ಲಿ ಇವರ ವಾದವು ವಚನ ಚಳುವಳಿಗೆ ಒಂದು ಆರ್ಥಿಕ ಹಿನ್ನೆಲೆಯೇ ಇರುತ್ತದೆ ಎಂಬದೇ ಆಗಿದೆ. ಇದು ಮಾರ್ಕ್ಸ್‌ವಾದಿ ಹಿನ್ನೆಲೆಯ ಯೋಚನಾ ಲಹರಿಯಾಗಿದೆ.

"ಮಾರ್ಕ್ಸ್‌ವಾದದ ಪ್ರಕಾರ ಸಾಹಿತ್ಯವೂ ಸೇರಿದಂತೆ ಕಲೆಯು ಸಮಾಜದ ಮೇಲ್ ರಚನೆಗೆ ಸೇರಿರುವುದು. ಆದ್ದರಿಂದ ಸಮಾಜದ ಕೆಳರಚನೆಯ ಅರಿವಿಲ್ಲದೆ ಎಂದರೆ, ಸಮಾಜದ ಆರ್ಥಿಕ ಸಂಬಂಧಗಳ ಪೂರ್ಣ ಜ್ಞಾನವಿಲ್ಲದೆ, ಮೇಲ್ ರಚನೆಯಲ್ಲಿರುವ ಸಾಹಿತ್ಯ, ಕಲೆ ಇವುಗಳನ್ನು ಪೂರ್ಣಪ್ರಮಾಣದಲ್ಲಿ ಅರ್ಥೈಸಲು ಸಾಧ್ಯವಿಲ್ಲ."[2] ವೀರಣ್ಣ ಅವರ ಈ ವಾದವನ್ನು ಇತರ ಕೆಲವು ಆಧಾರಗಳೊಂದಿಗೆ ಈ ಮುಂದಿನಂತೆ ಚರ್ಚೆಮಾಡಲಾಗಿರುತ್ತದೆ. ಸಾಮಾನ್ಯವಾಗಿ ಹಲವರು ವಚನ ಚಳುವಳಿಯ ಹುಟ್ಟಿನ ಬಗೆಗೆ ಮಾತನಾಡುವಾಗ, ಆ ಕಾಲದಲ್ಲಿ ವೈದಿಕ ಧರ್ಮ ಜಡವಾಗಿತ್ತು. ಜನರಿಗೆ ಅರ್ಥವಾಗದ ರೀತಿಯಲ್ಲಿ ಪುರೋಹಿತರು ವ್ಯವಹರಿಸುತ್ತಿದ್ದರು, ಇವೇ ಮುಂತಾದ ಕಾರಣಗಳಿಂದ ಬಸವಣ್ಣ ವೈದಿಕ ಧರ್ಮದ ವಿರುದ್ಧ ತಿರುಗಿಬಿದ್ದು ಹೊಸ ಜನಸಾಮಾನ್ಯರ ಧರ್ಮದ ನೇತಾರನಾದ ಎಂದುಬಿಡುತ್ತಾರೆ. ಹಾಗೆ ನೋಡಿದರೆ ವೈದಿಕಧರ್ಮ ಯಾವ ಕಾಲದಲ್ಲೂ ಬ್ರಾಹ್ಮಣರನ್ನು ಬಿಟ್ಟು ಬೇರೆಯವರ ಬಳಿ ಬರಲೇ ಇಲ್ಲ. ವಚನ ಚಳುವಳಿಯ ಹುಟ್ಟಿನ ಹಿಂದೆ ಆ ಕಾಲದ ಚಾರಿತ್ರಿಕ ಅಂಶಗಳು

1. ಕನ್ನಡ ಉಪನ್ಯಾಸಕರು ,ಸರ್ಕಾರಿ ಪದವಿ ಪೂರ್ವ ಕಾಲೇಜು,ಹಿರೀಸಾವೆ,ಚನ್ನರಾಯಪಟ್ಟಣ (ತಾ)ಹಾಸನ ಜಿಲ್ಲೆ.

ಕೆಲಸ ಮಾಡಿರುವುದನ್ನು ಗುರುತಿಸಬಹುದು. ಶಕ್ತಿಶಾಲೀ ಸಾಮ್ರಾಟರಾದ ರಾಷ್ಟ್ರಕೂಟರ ಆಳ್ವಿಕೆ ಕೊನೆಯಾದ ಮೇಲೆ, ಕಲ್ಯಾಣ ಚಾಲುಕ್ಯರ ಕೊನೆಯ ಅರಸರ ಕಾಲಕ್ಕೆ ಸಾಮ್ರಾಟರ ಆಳ್ವಿಕೆ ಅಭದ್ರವಾಗಿತ್ತು. ಈ ಕಾಲದಲ್ಲಿ ಹಲವಾರು ಸಾಮಂತರು ಸ್ವಾತಂತ್ರ್ಯರಾಗತೊಡಗಿದ್ದು ಯುದ್ಧಗಳು ಹೆಚ್ಚಾಗಲು ಕಾರಣವಾಗಿತ್ತು.

ರಾಜರೆಲ್ಲ ನಿರಂತರವಾಗಿ ಯುದ್ಧ ಮಾಡುತ್ತಿದ್ದ ಪರಿಸ್ಥಿತಿಯಲ್ಲಿ ಜನಸಾಮಾನ್ಯರ ಬದುಕು ಅದಕ್ಕೆ ಹೊಂದಿಕೊಂಡ ಇಕ್ಕಟ್ಟು-ಬಿಕ್ಕಟ್ಟುಗಳಿಂದಲೇ ತುಂಬಿರುವುದು ತೀರ ಸಹಜ, ರಾಜರು ತಮ್ಮ ಯುದ್ಧಗಳ ವೆಚ್ಚನ್ನು ಭರಿಸಲು ಜನಸಾಮಾನ್ಯರ ಮೆಲೆ ಹೆಚ್ಚು ತೆರಿಗೆ ವಿಧಿಸುತ್ತಿದ್ದರು. ವಚನಕಾರರಾಗಿ ಬಂದವರೆಲ್ಲರೂ ಕಾಯಕಜೀವಿಗಳೇ ಆಗಿದ್ದು, ಈ ಕಾಲದ ಶಾಸನಗಳು, ಅಕ್ಕಸಾಲೆ, ನಾಯಿಂದ, ಅಂಬಿಗ, ಮಡಿವಾಳ, ಕಮ್ಮಾರ, ಕುಂಬಾರ ಇವರ ಮೇಲೆ ತೆರಿಗೆಗಳನ್ನು ಹಾಕಿರುವುದನ್ನು ಹೇಳುತ್ತವೆ.[3] ಯುದ್ಧಗಳ ಸಂದರ್ಭದಲ್ಲಿ ಸೇನೆ ಊರುಗಳ ಮೇಲೆ ಬಂದಾಗ ಅವರಿಗೆ ಹಲವಾರು ಸೌಲಭ್ಯಗಳನ್ನು ಒದಗಿಸಲು ಸಾಮಾನ್ಯ ಜನರು ಬಿಟ್ಟಿ ಕೆಲಸ ಮಾಡಬೇಕಾಗಿತ್ತು. ಈ ತೆರಿಗೆ ವಿಷಯಕ್ಕಾಗಿ ಜನರು ಪ್ರತಿಭಟಿಸಿದ ಉಲ್ಲೇಖಗಳು ಶಾಸನಗಳಲ್ಲಿವೆ. "ಅಧಿಕಾರಿಯೊಬ್ಬನು ತೆರಿಗೆಯನ್ನು ಕೊಡುವಂತೆ ಹಿಂಸಿಸಿದಾಗ ಅದನ್ನು ಪ್ರತಿಭಟಿಸಿ ವೀರನೊಬ್ಬನು ಹೋರಾಡಿ ಮಡಿದಂತೆ ಕ್ರಿ.ಶ. 1139ರ ಶಾಸನದಲ್ಲಿ ಚಿತ್ರಿತವಾಗಿದೆ ಎಂದರೆ, ಆಡಳಿತವು ತಮ್ಮ ಹಕ್ಕುಗಳನ್ನು ತುಳಿದು ಅನ್ಯಾಯವೆಸಗಿದಾಗ ಜನತೆಯು ಮೌನವಾಗಿ ಅದನ್ನು ಸಹಿಸಿಕೊಳ್ಳುತ್ತಿರಲಿಲ್ಲ. ಕೆಲವೊಮ್ಮೆ ಬಹಿರಂಗವಾಗಿ ಪ್ರತಿಭಟಿಸುತ್ತಿದ್ದರೆಂಬುದಕ್ಕೆ ಇವು ನಿದರ್ಶನಗಳು."[4] ಈ ಕಾಯಕ ಜೀವಿಗಳಿಗೆ ಅರಸರು, ಮಠ, ಅಧಿಕಾರಿಗಳು ಮತ್ತು ವ್ಯಾಪಾರಿಗಳಿಂದ ಶೋಷಣೆಯಾಗುತ್ತಿತ್ತು. ರಾಜರಿಗೆ ತೆರಿಗೆ, ವ್ಯಾಪಾರದಲ್ಲಿ ವರ್ತಕರಿಂದ ಮೋಸ, ಮಠ ಮತ್ತು ದೇವಾಲಯಗಳಲ್ಲಿ ಮಾಡಬೇಕಿದ್ದ ಬಿಟ್ಟಿ ಕೆಲಸಗಳು, ಇದರಿಂದ ನೊಂದ ವೃತ್ತಿ ಜೀವಿಗಳು ತಮ್ಮದೇ ಆದಂತಹ ವಿಶೇಷ ಗುಂಪುಗಳನ್ನು ಹೊಂದಿದ್ದರು.

ಈ ರೀತಿಯ ಗುಂಪುಗಳಾದ ಜೇಡಗೊತ್ತಳ, ಕಂಚುಗಾರಗೊತ್ತಳ, ಚಿಪ್ಪಿಗಗೊತ್ತಳ, ಗಾಣಒಕ್ಕಲು ಮುಂತಾದ ಗುಂಪುಗಳನ್ನು ಈ ಕಾಲದ ಶಾಸನಗಳು ಹೆಸರಿಸುತ್ತವೆ. ಈ ಕಾಲದಲ್ಲಿ ವೈದಿಕ ಧಾರ್ಮಿಕ ಕೇಂದ್ರಗಳಿಗಿಂತ ಶೈವ ದೇವಾಲಯಗಳು ಮತ್ತು ಮಠಗಳು ಹೆಚ್ಚು ಪ್ರಾಬಲ್ಯವಾಗಿದ್ದವು. ದೇವಾಲಯಗಳ ವ್ಯವಹಾರ ಎಷ್ಟು ದೊಡ್ಡದಾಗಿತ್ತೆಂದರೆ, ಜನಕೊಟ್ಟ ಕಾಣಿಕೆಗಳನ್ನು ತೆಗೆದುಕೊಂಡು ಸಾಲ ಕೊಟ್ಟು ಬಡ್ಡಿ ವಸೂಲು ಮಾಡುತ್ತಿದ್ದರು. ಕರ್ನಾಟಕದ ಶಾಸನಗಳಲ್ಲಿ ದೇವಸ್ಥಾನ ಮತ್ತು ಅಗ್ರಹಾರಗಳಿಗೆ ದಾನ ಕೊಟ್ಟ ಶಾಸನಗಳೇ ಹೆಚ್ಚು. ದಾನಪಡೆದ ಸ್ಥಳಗಳಲ್ಲಿ ತೆರಿಗೆ ಸಂಗ್ರಹವನ್ನೂ ಒಳಗೊಂಡಂತೆ ಎಲ್ಲ ಆರ್ಥಿಕ ವ್ಯವಹಾರಗಳನ್ನೂ ಈ ಧಾರ್ಮಿಕ ಕೇಂದ್ರಗಳೇ ನಿರ್ವಹಿಸುತ್ತಿದ್ದವು. ಈ ಧಾರ್ಮಿಕ ಕೇಂದ್ರಗಳ ಸ್ಥಾನಪತಿಗಳು ವೈಭವಿಗಳಾಗಿದ್ದರು. ಕ್ರಿ.ಶ. 1149ರ ಶಾಸನವೊಂದು ಭಕ್ತರು ಕೊಡುತ್ತಿದ್ದ ಧನವನ್ನು ಸುಕ್ಕು ಜಡೆಗಳ ಸಂದುಗಳಲ್ಲಿ ಸಿಕ್ಕಿಸಿಕೊಂಡು ಮಿಂಡುತೊತ್ತುಗಳಿಗೆ ಕೊಡುತ್ತಿದ್ದ

ತುಡುಗಣಿ ಗೊರವರನ್ನು ತಮಾಷೆ ಮಾಡುತ್ತದೆ. ಮಡಿವಾಳ ಮಾಚಿದೇವ ತನ್ನೊಂದು ವಚನದಲ್ಲಿ ಮಠಗಳ ಬಡ್ಡಿ ವ್ಯಾಪಾರವನ್ನು ಟೀಕಿಸುತ್ತಾನೆ.[5] ನಗೆಯ ಮಾರಿತಂದೆ ಮತ್ತು ಅಂಬಿಗರ ಚೌಡಯ್ಯ ತಮ್ಮ ವಚನದಲ್ಲಿ ಸ್ಥಾನಪತಿಗಳನ್ನು ಟೀಕಿಸಿದ್ದಾರೆ. ಈ ರೀತಿ ದೇವಾಲಯಗಳು ಅವ್ಯವಹಾರಗಳ ಮೂಲವಾಗಿದ್ದರಿಂದಲೆ ವಚನಕಾರರು ದೇವಾಲಯಗಳನ್ನು ನಿರಾಕರಣೆ ಮಾಡಲು ಕಾರಣವಾಯಿತು. ವಚನಕಾರರು ಪ್ರತಿಭಟಿಸಿದ್ದು, ಶೈವ ದೇವಾಲಯಗಳನ್ನೆ, ಏಕೆಂದರೆ ಶೈವೇತರವಾದ ಯಾವ ದೇವಾಲಯವೂ ಆ ಕಾಲಕ್ಕೆ ಪ್ರಭಾವಶಾಲಿಯಾಗಿರಲಿಲ್ಲ.

ಈ ದೇವಾಲಯಗಳ ಮಠಗಳಲ್ಲಿ ಸ್ಥಾನಪತಿಗಳಾಗಿದ್ದವರು ಕರ್ನಾಟಕಕ್ಕೆ ಹೊರಗಿನಿಂದ ಬಂದವರು. ಇವರು ಕೂಡ ವೈದಿಕ ಬ್ರಾಹ್ಮಣರಂತೆಯೇ ವೇದ ವೇದಾಂಗಳನ್ನು ತಮ್ಮ ಅಗ್ರಹಾರಗಳಲ್ಲಿ ಕಲಿಸುತ್ತಿದ್ದರೆಂದು ಕೋಡಿಮಠದ ಶಾಸನಗಳು ಹೇಳುತ್ತವೆ. ಇಲ್ಲಿ ವೇದಗಳ ಜೊತೆಗೆ ಶೈವಾಗಮಗಳನ್ನೂ ಕಲಿಸಲಾಗುತ್ತಿತ್ತು. ಇವರು ಕಲಿಸುತ್ತಿದ್ದದ್ದು ಉತ್ತಮೋತ್ತಮರಿಗೆ ಮಾತ್ರ. "ಶೈವಧರ್ಮವು ಮೂಲತಃ ಅವೈದಿಕವಾಗಿತ್ತು. ಕ್ರಮೇಣ ಅದರಲ್ಲಿ ಅನೇಕ ವೈದಿಕಾಚರಣೆಗಳು ಸೇರಿಕೊಂಡವು. ಕನ್ನಡ ಶಾಸನಗಳನ್ನು ನೋಡಿದರೆ; ಲಕುಲೀಶ–ಪಾಶುಪತರು ವೈದಿಕರಾಗಿದ್ದು, ಬ್ರಾಹ್ಮಣರಿಂದಲು ಪೂಜಿತರಾಗಿದ್ದರು. ಅವರು ಶಿವಾಗಮಗಳಲ್ಲಿ ಎಷ್ಟು ನಿಪುಣರಾಗಿದ್ದರೋ ವೇದಗಳಲ್ಲೂ ಅಷ್ಟೇ ಪಾಂಡಿತ್ಯವನ್ನು ಪಡೆದಿದ್ದರು."[6] ಈ ಶೈವರು ಕಲಿಸುತ್ತಿದ್ದುದು ಸಂಸ್ಕೃತದಲ್ಲಿಯೇ ಆಗಿದ್ದು, ಇವರು ಚಾತುರ್ವರ್ಣವನ್ನು ಒಪ್ಪಿಕೊಂಡಿದ್ದರು. ಈ ರೀತಿ ಈ ಶೈವ ಮಠಗಳೂ ಕಾಯಕ ಜೀವಿಗಳನ್ನು ವಿದ್ಯೆಯಿಂದ ದೂರವಿಟ್ಟು, ಜನರನ್ನು ಸುಲಿಗೆ ಮಾಡುತ್ತಿದ್ದರು. ರಾಜ, ಅಧಿಕಾರಿ, ಮಠ, ವ್ಯಾಪಾರಿ ಇವರೆಲ್ಲರ ಸುಲಿಗೆಯಿಂದ ರಕ್ಷಿಸಿಕೊಳ್ಳುವ ಮಾರ್ಗವೊಂದನ್ನು ಕಂಡುಕೊಳ್ಳಲು ವೃತ್ತಿಜೀವಿಗಳು ಪ್ರಯತ್ನಪಟ್ಟರು.

ಈ ಜನರ ಕಷ್ಟಗಳನ್ನು ಅರಿತಿದ್ದ ಭಂಡಾರಿಯಾಗಿದ್ದ ಬಸವಣ್ಣ ಈ ಚಳುವಳಿಯ ನಾಯಕನಾದ. ಅಗ್ರಹಾರದಲ್ಲಿ ಹುಟ್ಟಿ, ಚಿಕ್ಕಂದಿನಲ್ಲಿಯೇ ತಂದೆ ತಾಯಿಗಳನ್ನು ಕಳೆದುಕೊಂಡ ಬಸವಣ್ಣನನ್ನು ಅಗ್ರಹಾರದ ಜನಗಳು ನಡೆಸಿಕೊಂಡ ರೀತಿಯಿಂದ ಚಿಕ್ಕಂದಿನಲ್ಲೇ ಬಸವಣ್ಣನಿಗೆ ಬ್ರಾಹ್ಮಣ್ಯ ಬಗೆಗೆ ಒಂದು ಅಸಮಾಧಾನ ಸೃಷ್ಟಿಯಾಗಿದೆ. ಅನಂತರ ಬಸವಣ್ಣ ಮತ್ತು ಅಕ್ಕನಾಗಮ್ಮನಿಗೆ ಕೂಡಲಸಂಗಮದ ಶೈವ ಮಠದ ಈಶಾನ್ಯ ಗುರುಗಳು ಆಶ್ರಯ ಕೊಟ್ಟಿದ್ದಾರೆ. "ಈ ಶಿವಾಲಯಕ್ಕೆ ಅವನು ಬಂದ ದಿನ ನನಗೆ ಚೆನ್ನಾಗಿ ನೆನಪಿದೆ. ಬೆದರಿದ ಜಿಂಕೆಯ ಹಾಗೆ ಒಂದು ಕಂಬದ ಮರೆಯಲ್ಲಿ ಅವಿತು ನಿಂತಿದ್ದ. ಚಿಕ್ಕ ಹುಡುಗ, ಎಂಟು ಹತ್ತು ವರ್ಷದವನು. ಮುಖದ ತುಂಬಾ ಭಯ, ನೀನು ಯಾರು? ಊರು ಯಾವುದು, ತಂದೆ ತಾಯಿ ಯಾರು? ಇದ್ದಾರೆಯೋ ಇಲ್ಲವೊ? ಯಾಕೆ ಬಂದೆ? ಇಲ್ಲಿಗೆ ಕಳಿಸಿದ್ದು ಯಾರು? – ನೂರು ಸಲ ಕೇಳಿದರೂ ಒಂದು ಮಾತು ಹೊರಡಲಿಲ್ಲ. ನಾನೂ ಒಂಟಿ ಜೀವ. ಜೊತೆಗೊಬ್ಬರು ಸಿಕ್ಕಿದ ಹಾಗಾಯಿತು. ನನಗೆ ತಿಳಿದ ನಾಲ್ಕಕ್ಷರ ಹೇಳಿಕೊಡೋಣ ಅಂತ ನೋಡಿದರೆ, ಅವನಿಗೆ ವಯಸ್ಸಿಗೆ

ಮೀರಿದ ಜ್ಞಾನ ಸಾಧಿಸಿತ್ತು. ವೇದದ ಯಾವ ಭಾಗ ಕೇಳಲಿ ತಡವರಿಸದೆ ಹೇಳುತ್ತಿದ್ದ. ಯಾರದ್ದೋ ಬ್ರಾಹ್ಮಣರ ಮನೆಯ ಹುಡುಗ ಅಂದುಕೊಂಡೆ. ವೇದಪಾಠ ಮುಂದುವರಿಸಲೇ ಎಂದೆ ಬೇಡ ಅಂದು ಬಿಟ್ಟ. ವ್ಯಾಕರಣ, ಛಂದಸ್ಸು, ಆಗಮ– ಉಹುಂ, ಶಿವಲಿಂಗದ ಕಡೆ ಕೈ ತೋರಿಸಿದ. ಶಿವ ಬೇಕೆ? ಎಂದೆ, ಹೌದು ಎಂದ. ಹಾಗೆಯೇ ಹತ್ತೋ ಹನ್ನೊಂದೋ ವರ್ಷಗಳು ಉರುಳಿ ಹೋದವು. ಯಾವತ್ತೋ ತುಂಬ ಒತ್ತಿ ಕೇಳಿದ್ದಕ್ಕೆ ತನ್ನ ಹೆಸರು ಬಸವ ಎಂದು ಹೇಳಿದ್ದ."[7] ಪ್ರಭುಶಂಕರ ಅವರ 'ಬಸವಣ್ಣ ಎಂಬ ಬೆರಗು' ಕೃತಿಯಲ್ಲಿ ಈಶಾನ್ಯ ಮೂರ್ತಿ ಹೇಳಿರುವ ಈ ಮಾತುಗಳನ್ನು ಗಮನಿಸಿದರೆ, ಬಸವಣ್ಣ ಬ್ರಾಹ್ಮಣ್ಯವನ್ನು ವಿರೋಧಿಸಲು ಅವನ ಚಿಕ್ಕ ವಯಸ್ಸಿನಲ್ಲಿ ಅಗ್ರಹಾರದ ಜನ ನಡೆಸಿಕೊಂಡ ರೀತಿಯೂ ಒಂದು ಕಾರಣ ಎಂಬುದು ಸ್ಪಷ್ಟವಾಗುತ್ತದೆ.

ಬಸವಣ್ಣ ವಚನವೊಂದರಲ್ಲಿ ಹೇಳುವ 'ಏನಯ್ಯಾ ವಿಪ್ರರು ನುಡಿದಂತೆ ನಡೆಯರು, ಇದೆಂತಯ್ಯ ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ' ಎನ್ನುವುದು ಈ ಸಂದರ್ಭಕ್ಕೆ ಚೆನ್ನಾಗಿ ಅನ್ವಯಿಸಿದೆ. ಇಡೀ ಸಂದರ್ಭದಲ್ಲಿ ಬಸವಣ್ಣನಿಗೆ ಶೈವಮಠಗಳ ನೈಜ ಚಿತ್ರಣವೂ ಅರಿವಿಗೆ ಬಂದಿದೆ. ಕಲಚೂರಿಗಳು ಕರ್ನಾಟಕಕ್ಕೆ ಉತ್ತರ ಭಾರತದಿಂದ ಬಂದವರು. ಅವರು ಶೈವರಾಗಿದ್ದು, ವೃಷಭಧ್ವಜರೂ ಆಗಿದ್ದರು. ಬಿಜ್ಜಳನಿಗೆ ಸಂಗಮದ ಮಠ ಆಪ್ತವಾಗಿತ್ತು. ಈ ಸಂದರ್ಭದಲ್ಲಿ ಬಸವಣ್ಣನ ಬುದ್ಧಿವಂತಿಕೆ ಬಿಜ್ಜಳನಿಗೆ ತಿಳಿದು ಬಸವಣ್ಣ ಭಂಡಾರದ ಕರಣಿಕನಾಗಿದ್ದಾನೆ. ಮಂಗಳವೇಡೆಯಲ್ಲಿ ಮಂಡಲೇಶ್ವರನಾಗಿದ್ದ ಬಿಜ್ಜಳ ಚಕ್ರವರ್ತಿಯಾದ ಮೇಲೆ ಬಸವಣ್ಣ ಸಾಮಾನ್ಯ ಕರಣಿಕನಾಗಿದ್ದವನು ಭಂಡಾರಿಯಾಗಿದ್ದಾನೆ.

"ಬಿಜ್ಜಳನಲ್ಲಿ ತೆರಿಗೆ ವಿಭಾಗವಾದ ಭಂಡಾರದ ಕರಣಿಕನಾಗಿದ್ದವನಿಗೆ, ಅಧಿಕಾರಿಗಳ ನಡವಳಿಕೆಗಳು, ಅವರು ಮಾಡುವ ಸುಲಿಗೆಗಳು, ಮಠಗಳಲ್ಲಿ ನಡೆಯುವ ಲೌಕಿಕ ವ್ಯವಹಾರ ಎಲ್ಲದರ ಅರಿವಾಗಿದೆ. ಇದಲ್ಲದೆ ತೆರಿಗೆಗಳನ್ನು ಕೊಡಲಾಗದೆ ತಮ್ಮ ಕಷ್ಟಗಳನ್ನು ಹೇಳಿಕೊಳ್ಳಲು ಬರುತ್ತಿದ್ದ ಅನೇಕ ವೃತ್ತಿ ಜೀವಿಗಳ ಪರಿಚಯವಾಗಿ, ಅವರಲ್ಲಿ ಅನೇಕರು ಆತ್ಮೀಯರೂ ಆಗಿದ್ದಾರೆ. ಹೀಗೆ ಆತ್ಮೀಯರಾಗಿ ಬಂದವರಲ್ಲಿ ಮಡಿವಾಳ ಮಾಚಿದೇವ, ಅಂಬಿಗರ ಚೌಡಯ್ಯ ಇವರೇ ಮೊದಲಾದವರು ಆದ್ಯರಾಗುತ್ತಾರೆ. ಏಕೆಂದರೆ ಇವರೇ ತನ್ನ ಕಣ್ಣು ತೆರೆಸಿ ಶುದ್ಧ ಮಾಡಿದರೆಂಬ ಕೃತಜ್ಞತೆಯ ಮಾತನ್ನು ಬಸವಣ್ಣ ಹೇಳುವುದರಿಂದ, ಇವರೆ ಕಾಯಕ ಜೀವಿಗಳ ಚಳುವಳಿಯತ್ತ ಅವರನ್ನು ಆಕರ್ಷಿಸಿದರು ಎನ್ನಬಹುದು."[8] ಈ ರೀತಿಯಾಗಿ ಬಸವಣ್ಣ ಅಗ್ರಹಾರ ಮತ್ತು ಮಠಗಳು ಸಾಮಾನ್ಯ ಜನರನ್ನು ಶೋಷಿಸುತ್ತಿದ್ದುದನ್ನು ಸ್ವತಃ ನೋಡಿದ್ದ ಮತ್ತು ಕಾಯಕ ಜೀವಿಗಳ ನಿಲುವು ಅವನಿಗೆ ಸರಿಯೆನಿಸಿ, ಅವನಲ್ಲಿದ್ದ ವಿದ್ವತ್ತಿನ ಬಲ ಹಾಗೂ ಅಧಿಕಾರದ ಬಲ ಎರಡೂ ಬಸವಣ್ಣನನ್ನು ಸಂಘಟನೆಯ ನಾಯಕನಾಗುವಂತೆ ಮಾಡಿದೆ. ನಾವು ಇಲ್ಲಿಯವರೆಗೆ ಸಿ. ವೀರಣ್ಣ ಅವರು ಹೇಳಿರುವ ವಚನ ಚಳುವಳಿಗೆ ಕಾರಣವಾದ ಚಾರಿತ್ರಿಕ ಹಿನ್ನಲೆಯನ್ನು ಸಂಕ್ಷಿಪ್ತವಾಗಿ ಹೇಳುವ ಜೊತೆಗೆ ಅವರ ವಾದಗಳನ್ನು ವಚನ ಚಳುವಳಿಯ ಉಗಮಕ್ಕೆ ಸಂಬಂಧಿಸಿದ ಕೆಲವು ಸಂಶೋಧಕರ ವಾದಗಳೊಂದಿಗೆ

ಚರ್ಚಿಸಿದ್ದೇವೆ. ವಚನ ಚಳುವಳಿಯ ಮೂಲ ಸೆಲೆ ಇರುವುದು ಆ ಕಾಲದ ಆರ್ಥಿಕ ಪರಿಸ್ಥಿತಿಯಲ್ಲಿ. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು ಆ ಸೆಲೆಯೊಂದಿಗೆ ಸೇರಿಕೊಂಡಿವೆ ಎಂಬುದು ವೀರಣ್ಣ ಅವರ ವಾದ. ಆ ಕಾಲದ ರಾಜಕೀಯ ಪರಿಸ್ಥಿತಿ ಮತ್ತು ಶಾಸನಾಧಾರಗಳನ್ನು ಗಮನಿಸಿದರೆ ಈ ವಾದ ಸರಿಯೆನಿಸುತ್ತದೆ.

ಜಡ ವೈದಿಕ ವ್ಯವಸ್ಥೆಯ ವಿರುದ್ಧ ವಚನಕಾರರು ತಿರುಗಿ ಬಿದ್ದರು ಎಂಬ ಸಾಮಾನ್ಯವಾದವನ್ನು ವೀರಣ್ಣ ಅವರು ಸಾಕ್ಷಿ ಆಧಾರಗಳ ಮೂಲಕ ಮುರಿದಿದ್ದಾರೆ. ವಚನಕಾರರು ಹೆಚ್ಚು ವಿರೋಧಿಸಿದ್ದು, ಆ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಶೈವ ಮಠಗಳನ್ನೆ. ಆ ಕಾಲದಲ್ಲಿ ಶೈವ ಮಠಗಳು ವೈದಿಕ ಅಗ್ರಹಾರಗಳಿಗಿಂತ ಯಾವ ವಿಷಯದಲ್ಲೂ ಭಿನ್ನವಾಗಿರಲಿಲ್ಲ ಎಂಬುದು ಪ್ರಸ್ತುತ ಚರ್ಚೆಯಲ್ಲಿ ಸ್ಪಷ್ಟವಾಗುತ್ತದೆ. "ಜೇಡರ ದಾಸಿಮಯ್ಯನಿಂದ ಪ್ರಾರಂಭವಾಗುವ ವಚನಕಾರರ ಪರಂಪರೆಯ ಅಂತರ್ಗತವಾಗಿದ್ದ ಕಾಯಕ ಜೀವಿಗಳ ಸಂಘಟನಾತ್ಮಕ ಚೈತನ್ಯ ಒಂದು ವ್ಯವಸ್ಥಿತ ರೂಪವನ್ನು ತಳೆದು ಒಂದು ಸಾಮಾಜಿಕ ಕ್ರಾಂತಿಯ ಚಳವಳಿಯಂತೆ ಮಾರ್ಪಾಡಾಗುತ್ತದೆ."[೨] ಈ ವ್ಯವಸ್ಥಿತವಾದ ಚಳುವಳಿ ಆ ಕಾಲದಲ್ಲಿ ಪ್ರಚಲಿತವಾಗಿದ್ದ ಆಡಳಿತ ವ್ಯವಸ್ಥೆ ಮತ್ತು ಧಾರ್ಮಿಕ ಕೇಂದ್ರಗಳ ಪರವಾಗಿದ್ದ ಸಂಸ್ಕೃತಿಯನ್ನು ಮುರಿದು ಜನಸಾಮಾನ್ಯರಿಗೆ ಪೂರಕವಾದ ಒಂದು ಪರ್ಯಾಯ ಸಂಸ್ಕೃತಿಯನ್ನು ಸೃಷ್ಟಿಸಿದರು.

**ಕೊನೆ ಟಿಪ್ಪಣಿಗಳು**

1. ಸಿ. ವೀರಣ್ಣ : **ಕನ್ನಡ ಸಾಹಿತ್ಯ : ಚಾರಿತ್ರಿಕ ಬೆಳವಣಿಗೆ-2 ;** ಪು.ಸಂ 46.
2. ಸಿ.ಎನ್. ರಾಮಚಂದ್ರನ್ ; **ಸಾಹಿತ್ಯ ವಿಮರ್ಶೆ ;** ಪು.ಸಂ 66.
3. ಕ್ರಿ.ಶ. 1160ರ ಶಾಸನ ದೋಣಿ ಮತ್ತು ತೆಪ್ಪಗಳಿಗೆ ಸುಂಕ ಹಾಕುತ್ತಿದ್ದುದನ್ನು ಹೇಳಿದರೆ, ಕ್ರಿ.ಶ. 1162ರ ಶಾಸನ ಬುಟ್ಟಿ ಹೆಣೆಯುವುದರ ಮೇಲೆ ಮೇದತೆರೆ ಹಾಕಿದ್ದನ್ನು, ಅದೇ ಕಾಲದ ಮತ್ತೊಂದು ಶಾಸನ ಕುಂಬಾರರ ಮೇಲೆ ತೆರಿಗೆ ಹಾಕಿದ್ದನ್ನು ಹೇಳುತ್ತದೆ. ಕ್ರಿ.ಶ. 1160 ರ ಶಾಸನವೊಂದು ಬಳೆಗಾರರಿಗೆ ಸುಂಕ ಹಾಕಿದ್ದನ್ನು ತಿಳಿಸುತ್ತದೆ. ಸಿ. ವೀರಣ್ಣ ಕನ್ನಡ ಸಾಹಿತ್ಯ : ಚಾರಿತ್ರಿಕ ಬೆಳವಣಿಗೆ. ಸಂ. 2, ಪು.ಸಂ 47.
4. ಎಂ. ಚಿದಾನಂದ ಮೂರ್ತಿ : **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ;** ಪು.ಸಂ 450.

ಅರ್ಥದಾಸೆಗಾಗಿ ಬಡ್ಡಿಯ ತೆಗೆದುಕೊಂಡು
ಬಡವರ ಬಂಧನಕ್ಕಿಕ್ಕಿ, ತಡುಗು ವ್ಯಾಪಾರವ ಮಾಡಿ
ಸದಾಚಾರದಿಂದ ಆಚರಿಸಲರಿಯದೆ ತನು ಮನ ಧನದಲ್ಲಿ
ವಂಚನೆಯಿಲ್ಲದ ಭಕ್ತರನರಿಯದೆ ತೀರ್ಥಪ್ರಸಾದ

ದಲ್ಲಿ ನಂಬುಗೆ ವಿಶ್ವಾಸವಿಲ್ಲದೆ ಕಂಡವರಕಂಡು ಕೈಯೊಡ್ಡಿ

ಇಕ್ಕಿಸಿಕೊಂಡು ವಿಶ್ವಾಸವಿಲ್ಲದವರಿಗೆ ಅಷ್ಟಾವರಣ ಎಂತು ಸಿದ್ಧಿಯೇ (ಮಡಿವಾಳ ಮಾಚಿದೇವ)

5. ಎಂ. ಚಿದಾನಂದಮೂರ್ತಿ **: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ,** ಪು.ಸಂ 160.
6. ಪ್ರಭುಶಂಕರ**: ಬೆರಗು ;** ಪು.ಸಂ 14–15.
7. ಸಿ. ವೀರಣ್ಣ**: ಕನ್ನಡ ಸಾಹಿತ್ಯ** : **ಚಾರಿತ್ರಿಕ ಬೆಳವಣಿಗೆ–2 ;** ಪು.ಸಂ 57–58.
8. ಪೂರ್ವೋಕ್ತ. ಪು.ಸಂ 160.